Sri SANJEEVANATH AIKALA.—When the Minister for Sericulture has already gone at Government cost, where was the necessity for the Deputy Minister also to go at Government cost ? He could spend money from his own pocket ?

Mr. SPEAKER.—Spending money from his pocket for official purpose ?

Sri SANJEEVANATH AIKALA.—Yes, Sir, those who can afford, because there was no necessity.

Sri S. NIJALINGAPPA.—Government felt otherwise, Sir.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾವು ನನ್ನದು ಒಂದು ಬರೀ ಊಹೆಯ ಪ್ರಶ್ನೆ ಎಂದು ಹೇಳಿದಿರಿ, ಫಾರೆಸ್ಟ್ ಮಿನಿಸ್ಟರು ಮತ್ತು ಸೆರಿಕಲ್ಚರಲ್ ಡೆಪ್ಯೂಟಿ ಮಿನಿಸ್ಟರು ಅವರಿಬ್ಬರೂ ಜಪಾನ್‌ಗೆ ಹೋಗುವಾಗ ವ್ಯತ್ಯಾಸ ಬಂದು ತಾವು ಕೊನೆಯ ಗಳಿಗೆಯಲ್ಲಿ ಡೆಪ್ಯೂಟಿ ಮಿನಿಸ್ಟರು ಹೋಗ ಬೇಕೆಂದು ತೀರ್ಮಾನ ಕೈಕೊಂಡದ್ದು ಸರಿಯಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮೊದಲನೇ ಪ್ರಶ್ನೆಗೆ ಊಹೆ ಎಂದು ಹೇಳಿದೆ. ಪುನಃ ಇದಕ್ಕೂ ಊಹೆ ಎಂದು ಹೇಳಬೇಕಾಗುತ್ತದೆ.

Enlistment of Non-S.S.L.C. Candidates under C.R.B.

*Q.—105. Sri V. S. LAKSHMIKANTHAPPA (Sagar).—

Will the Government be pleased to state :—

(*a*) the year of enlistment of non-S.S.L.C. candidates under C.R.B in Shimoga District for Primary School Teachers' posts ;

(*b*) the number of such candidates in the said list waiting for appointment in Shimoga District at present ?

A.—Sri S. R. KANTHI (Minister for Education).—

(*a*) 1957.

(*b*) There is no question of any candidate waiting for appointment. The list was valid for the year 1957 only. But appointing authorities might have used the list subject to recruitment rules in force, if no other list was available from P.S.C. or D.L.R.C.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಉತ್ತರದಲ್ಲಿ ಸಿ.ಆರ್.ಬಿ. ಲಿಸ್ಟ್ 1957ನೇ ಇಸವಿಗೆ ಮಾತ್ರ ಮಾಡಿದ್ದೆವು; ಅದರ ನಂತರ ಡಿ.ಎಲ್.ಆರ್.ಸಿ. ಮತ್ತು ಪಿ.ಎಸ್.ಸಿ. ಲಿಸ್ಟ್ ತಯಾರಾಗಿದೆ ಎಂದು ಹೇಳಿದ್ದೀರಿ. 1957ನೇ ಇಸವಿಯಲ್ಲಿ ತಯಾರಾಗಿರತಕ್ಕ ಲಿಸ್ಟ್‌ನಲ್ಲಿದ್ದ ಸುಮಾರು 600 ಅಭ್ಯರ್ಥಿಗಳಿಗೆ ಕೆಲಸ ಸಿಕ್ಕದೇ ಈಚೆಗೆ ತಯಾರಾದ ಪಿ.ಎಸ್.ಸಿ. ಮತ್ತು ಡಿ.ಎಲ್.ಆರ್.ಸಿ. ಲಿಸ್ಟ್‌ನಲ್ಲಿದ್ದ ಅಭ್ಯರ್ಥಿಗಳಿಗೆ ಕೆಲಸ ಕೊಡುತ್ತಾ, ಇರುವುದರಿಂದ ಅವರಿಗೆ ಅನ್ಯಾಯವಾಗಿರುವುದನ್ನು ಸರ್ಕಾರ ಗಮನಿಸಿಲ್ಲವೇ ?

†ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಅನ್ಯಾಯದ ಪ್ರಶ್ನೆ ಬರುವುದಿಲ್ಲ. ಆ ಲಿಸ್ಟ್ ಆ ವರ್ಷಕ್ಕೆ ಮಾತ್ರ ಇತ್ತು. ಅಷ್ಟು ಜನ ರೆಕ್ರೂಟ್‌ಮೆಂಟ್ ಆಗಲಿಲ್ಲ. ಆ ಲಿಸ್ಟನ್ನು ತೆಗೆದುಹಾಕಿದೆ ಅಷ್ಟೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಹಿಂದೆ ಸಿ.ಆರ್.ಬಿ. ಲಿಸ್ಟ್‌ನ್ನು ಮಾಡುವಾಗ ಆಯಾಯಾ ವರ್ಷಕ್ಕೆ ಅಂತ ಮಾಡುತ್ತಾ ಇದ್ದರೇ ಅಥವಾ ತಯಾರು ಮಾಡಿದ್ದು ಪೂರೈಸುವವರೆಗೂ ಅವರಿಗೆ ಕೆಲಸಗಳನ್ನು ಕೊಡುವ ಉದ್ದೇಶದಿಂದ ತಯಾರು ಮಾಡುತ್ತಾ ಇದ್ದರೋ ?

ಶ್ರೀ ಎಸ್. ಆರ್. ಕಂಠಿ.—ವರ್ಷ್‌ವರ್ಷ ಆ ಲಿಸ್ಟನ್ನು ರಿವೈಸ್ ಮಾಡಬೇಕಾಗುತ್ತದೆ, ಆ ರೀತಿ ರಿವೈಸ್ ಮಾಡುವುದು ಅನಾವಶ್ಯಕ ಎಂದು ಹೇಳಿ ಮಾಡಲಿಲ್ಲ. ಒಂದೊಂದು ವರ್ಷಕ್ಕೆ ಅಂತ ಹೇಳಿ ಮಾಡಿದ್ದರು.

†Indicates that the remarks or speeches have not been revised by the member concerned

ಶ್ರೀ ಎಚ್. ಆರ್. ಕೇಶವಮೂರ್ತಿ.—10—11 ತಿಂಗಳು ಕೆಲಸ ಮಾಡಿರತಕ್ಕ ಉಪಾಧ್ಯಾಯರನ್ನು ಮನೆಗೆ ಕಳುಹಿಸಿ ಡಿ.ಎಲ್.ಆರ್.ಸಿ. ಲಿಸ್ಟ್‌ನಲ್ಲಿದ್ದವರನ್ನು ನೇಮಕ ಮಾಡಿಕೊಂಡಿದ್ದೀರಿ. ಹಾಗಿದ್ದರೆ ಆ ಲಿಸ್ಟ್‌ನಲ್ಲಿದ್ದವರಿಗೆ ಯಾವ ರೀತಿ ನ್ಯಾಯ ದೊರಕಿಸಿಕೊಡುತ್ತೀರಿ ಅಥವಾ ಅವರಿಗೆ ಏನು ಪರಿಹಾರ ಕೊಡುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಜಿ.ಎ. ತಿಮ್ಮಪ್ಪಗೌಡ.—1957ನೇ ಇಸವಿಯಲ್ಲಿ ತಯಾರಾದ ಸಿ.ಆರ್.ಬಿ. ಲಿಸ್ಟ್ ಪ್ರಕಾರ ನಾನ್-ಎಸ್.ಎಸ್.ಎಲ್.ಸಿ. ಉಪಾಧ್ಯಾಯರನ್ನು ಹೋದ ವರ್ಷದವರೆಗೂ ಸರ್ಕಾರದವರು ನೇಮಕ ಮಾಡಿಕೊಳ್ಳುತ್ತಾ ಇದ್ದುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಪಿ.ಎಸ್.ಸಿ. ಮತ್ತು ಡಿ.ಎಲ್.ಆರ್.ಸಿ. ಲಿಸ್ಟ್ ಇಲ್ಲದೆ ಇದ್ದರೆ ಆ ಲಿಸ್ಟ್‌ನಿಂದ ತೆಗೆದುಕೊಳ್ಳುವುದು ಅನುಕೂಲ ಎಂದು ಹೇಳಿ ಆ ಪ್ರಕಾರ ತೆಗೆದು ಕೊಂಡಿದ್ದಾರೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—1957ನೆ ಇಸವಿಯಲ್ಲಿ ಸಿ.ಆರ್.ಬಿ. ಲಿಸ್ಟ್‌ನಲ್ಲಿ ಇದ್ದಂತಹ 600 ಜನರಿಗೆ ಸರ್ಕಾರದವರು ಸಹಾನುಭೂತಿಯಿಂದ ಪರಿಗಣನೆ ಮಾಡಿ ಅವರನ್ನು ಕೆಲಸಕ್ಕೆ ತೆಗೆದು ಕೊಳ್ಳಲು ಒಪ್ಪಿಗೆಯನ್ನು ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ನಾನ್-ಎಸ್.ಎಸ್.ಎಲ್.ಸಿ. ತೆಗೆದುಕೊಳ್ಳುವುದು ಹೆಣ್ಣು ಮಕ್ಕಳನ್ನು ಮಾತ್ರ. ಸಿ.ಆರ್.ಬಿ. ನಲ್ಲಿ ಎಸ್.ಎಸ್.ಎಲ್.ಸಿ. ಆಗಿದ್ದರೆ ತೆಗೆದುಕೊಳ್ಳುತ್ತಾ ಇದ್ದರು. ಪಿ.ಎಸ್.ಸಿ. ಮತ್ತು ಡಿ.ಎಲ್.ಆರ್.ಸಿ. ಲಿಸ್ಟ್‌ನಲ್ಲಿ ಆ ಜಿಲ್ಲೆಗೆ ಸೇರಿದವರು ಇಲ್ಲದೇ ಇದ್ದರೆ ತೆಗೆದು ಕೊಳ್ಳುವುದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—1957 ರಲ್ಲಿ ಸಿ.ಆರ್.ಬಿ. ಲಿಸ್ಟ್ ಮಾಡಿದ ಮೇಲೆ ಅವರಿಗೆ ಕೆಲಸ ಕೊಡುತ್ತೇವೆ ಎಂದು ಭರವಸೆ ಕೊಟ್ಟಂತೆ ಆಯಿತು ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಭರವಸೆ ಕೊಟ್ಟಂತೆ ಅಲ್ಲ, ಅದನ್ನು ಆ ವರ್ಷಕ್ಕೆ ಮಾತ್ರ ಮಾಡಿದ್ದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಕಷ್ಟ ಎಲ್ಲಾ ಒಂಧಕ್ಕಿಂತಲೂ ಮಿಗಿಲಾಗಿ ಉಪಾಧ್ಯಾಯರನ್ನು ನೇಮಕ ಮಾಡತಕ್ಕ ಅಥವಾ ಗುಮಾಸ್ತರನ್ನು ನೇಮಕ ಮಾಡತಕ್ಕ ಏಜೆನ್ಸಿ ಇರುವುದರಿಂದ ಆಗಿದೆ. ಆದ್ದರಿಂದ ಒಂದೇ ಒಂದು ಏಜೆನ್ಸಿಯನ್ನು ಇಟ್ಟು ಈ ಕಷ್ಟವನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಮೊದಲು ಸಿ.ಆರ್.ಬಿ. ಒಂದೇ ಏಜೆನ್ಸಿ ಇತ್ತು. ಈಗ ಡಿ.ಎಲ್.ಆರ್.ಸಿ. ಮತ್ತು ಪಿ.ಎಸ್.ಸಿ. ಇದೆ.

ಶ್ರೀ ಕುಂದೂರು ರುದ್ರಪ್ಪ.—ಒಂದು ಸಾರಿ ಸಿ.ಆರ್.ಬಿ.ಗೆ ಹೆಸರು ಬಂದ ಮೇಲೆ ಆ ಹೆಸರು ಖಾಯಂ ಆದ ಹಾಗೆ ಅಲ್ಲವೇ ? ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೇ ಇದ್ದರೆ ತಪ್ಪು ಯಾರದು ?

ಶ್ರೀ ಎಸ್. ಆರ್. ಕಂಠಿ.—ಅದು ಹಾಗೆ ಅಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ರೂಲ್ಸ್‌ಗೆ ವಿರುದ್ಧವಾಗಿ ಲಿಸ್ಟ್ ಮಾಡಿದ್ದಾರೆ, ನಮ್ಮನ್ನು ಕೆಲಸಕ್ಕೆ ತೆಗೆದುಕೊಂಡಿಲ್ಲ ಎಂದು ಹೇಳಿ ಹೈಕೋರ್ಟಿಗೆ ರಿಟ್ ಹೋಗಿ ಆ ರಿಟ್ ಅರ್ಜೀ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದು ಗೊತ್ತಿಲ್ಲ. ರಿಟ್ ಅರ್ಜೀ ಆಗಿದ್ದರೆ ಆ ಪ್ರಕಾರ ತೆಗೆದು ಕೊಳ್ಳಬೇಕೆಂದು ಅವರು ಆದೇಶ ಕೊಟ್ಟರೆ ಆ ಜನರನ್ನು ತೆಗೆದುಕೊಳ್ಳುತ್ತಾರೆ.

Sri C. J. MUCKANNAPPA.—Will the Government very seriously apply their mind and consider that appointments must be made only by one agency and not by several agencies, because it is troublesome to the candidates who are coming up for job, Sir ?

Sri S. R. KANTHI.—There is always one agency at any timee Though it seems to be that there are so many agencies, they have com. into the picture one after the other.

Mr. SPEAKER.—They did not co-exist. One or the other at a time was existing.

ಶ್ರೀ ಕುಂದೂರು ರುದ್ರಪ್ಪ.—1957 ರಲ್ಲಿ ಎಸ್.ಎಸ್.ಎಲ್.ಸಿ. ಆಗಿರದವರನ್ನು ತೆಗೆದು ಕೊಳ್ಳುವುದಾಗಿ ಹೇಳಿದಮೇಲೆ ಅರ್ಜಿ ಹಾಕಿದವರನ್ನು ಗೆಜಿಟ್ಟಿನಲ್ಲಿ ಪಟ್ಟಿ ಮಾಡಿದಿರಿ. ಹಾಗೆ ಮಾಡಿದ ಮೇಲೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದು ಸರಕಾರದ ಕರ್ತವ್ಯವಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಸೆಲೆಕ್ಷನ್ ಮಾಡಿದ ಮಾತ್ರಕ್ಕೇ ತೆಗೆದುಕೊಳ್ಳಬೇಕೆಂದಿಲ್ಲ. ಆ ವರ್ಷ ತೆಗೆದುಕೊಳ್ಳಲು ಎಷ್ಟು ಸಾಧ್ಯವೋ ಅಷ್ಟನ್ನು ತೆಗೆದುಕೊಳ್ಳುತ್ತಾರೆ. ಆಮೇಲೆ ಉಳಿದ ಲಿಸ್ಟ್ ವಜಾ ಆಗುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಹಾಗಾದರೆ ಆ ಲಿಸ್ಟ್ ಆಪ್ರೂವ್ ಆಗಿರಲಿಲ್ಲವೇ?

ಅಧ್ಯಕ್ಷರು.—ಅನ್ಯಾಯವಾಗಿದ್ದರೆ ಅದನ್ನು ಬರೆದುಕೊಡಿ. ನೋಡಿ ಸಾಧ್ಯವಿರುವುದನ್ನು ಮಾಡುತ್ತಾರೆ.

Sri S. SIVAPPA.—When the list was prepared in 1957, was it specifically mentioned that the list was for 1957 only?

Sri S. R. KANTHI.—When a number of appointments are being made, we refer to the C.R.B. or P.S.C. or some other agency, and the list is good only for those appointments.

Mr. SPEAKER.—The list was valid for the year 1957 only.

Sri S. SIVAPPA.—But when it was advertised or notified in the Gazette, that was not there. A list was made in 1957 to recruit teachers as and when vacancies occur. But some of the candidates listed in 1957 and given appointments were turned out subsequently.

Mr. SPEAKER.—This is something totally different. I will give the member another chance.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—1957ನೆಯ ಇಸವಿಯಲ್ಲಿ ಮಾಡಿದ ಲಿಸ್ಟ್ ಪ್ರಕಾರ ಯಾರನ್ನು ತೆಗೆದುಕೊಂಡಿಲ್ಲವೋ ಅವರನ್ನು ತೆಗೆದುಕೊಳ್ಳುವಂತೆ ತಿಳಿಸುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಕಾಗೆ ತೆಗೆದುಕೊಳ್ಳಬೇಕಾದರೆ ಎಸ್.ಎಸ್.ಎಲ್.ಸಿ. ಆಗಿರಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದೇ ಏಜೆನ್ಸಿ ಮೂಲಕ ತೆಗೆದುಕೊಳ್ಳುವುದು ನೂಕ್ತವಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಈಗ ಮಾಡಿರುವ ವ್ಯವಸ್ಥೆ ನುಲಭವಾಗಿದೆ.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ಎಸ್.ಎಸ್.ಎಲ್.ಸಿ. ಆಗಿರದ ಹರಿಜನರು ಮತ್ತು ಗಿರಿಜನರಿಗೆ ಏನಾದರೂ ರಿಯಾಯಿತಿ ಇದೆಯೇ?

ಶ್ರೀ ಎಸ್. ಆರ್. ಕಂಠಿ.—ಯಾರಿಗೂ ಇಲ್ಲ, ಹೆಣ್ಣುಮಕ್ಕಳಿಗೆ ಮಾತ್ರ ಇದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಿ.ಆರ್.ಬಿ. ಲಿಸ್ಟ್ 1957 ಕ್ಕೆ ಮಾತ್ರವಲ್ಲ, ಕಡ್ಡಾಯವಾಗಿ ಮುಂದೆಯೂ ಅವರನ್ನು ತೆಗೆದುಕೊಳ್ಳಬೇಕು. ಹೈಕೋರ್ಟಿಗೆ ಈ ಪ್ರಶ್ನೆ ಹೋಗುವುದಕ್ಕೆ ಮುಂಚೆ ಲೀಗಲ್ಲಾಗಿ ಪರಿಶೀಲನೆಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಕಡ್ಡಾಯವಿಲ್ಲ. ನೂರು ಜನರು ಬೇಕಾದರೆ ಇನ್ನೂರು ಜನರ ಲಿಸ್ಟನ್ನು ಕಳಿಸಿರುತ್ತಾರೆ. ಆದುದರಿಂದ ಕೆಲವರಿಗೆ ಹುದ್ದೆ ಸಿಕ್ಕಿ ಕೆಲವರಿಗೆ ಸಿಕ್ಕದಿರಬಹುದು.

Sri S. SIVAPPA.—Has it come to the notice of the Government that some of the teachers who were appointed from the 1957 list, prepared according to the rules framed by the Government, have been turned out?

Sri S. R. KANTHI.—I have no idea.

Sri S. SIVAPPA.—If it is brought to the notice of the Government that some of the teachers have been turned out, will they think the desirability of re-employing them?

Sri S. R. KANTHI.—It will be looked into if the cases are brought to my notice.

ಶ್ರೀ ಎಚ್. ಡಿ. ದೇವೇಗೌಡ.—ಎಸ್.ಎಸ್.ಎಲ್.ಸಿ. ಆಗಿಲ್ಲದವರು ಕೆಲಸಮಾಡುತ್ತಿದ್ದ ರಿಜೆಕ್ಟರ್ ಆದರೆ ಅಥವಾ ಸತ್ತುಹೋದರೆ ಅವರ ಜಾಗದಲ್ಲಿ ಎಸ್.ಎಸ್.ಎಲ್.ಸಿ. ಆಗಿಲ್ಲದವನನ್ನು ನೇಮಕಮಾಡುವಿರಾ?

ಶ್ರೀ ಎಸ್. ಆರ್. ಕಂಠಿ.—1962ನೆಯ ಇಸವಿಯಲ್ಲಿ ಸರಕಾರ ನಿರ್ಣಯ ಮಾಡಿರುವ ಪ್ರಕಾರ ಎಸ್.ಎಸ್.ಎಲ್.ಸಿ. ಆಗಿಲ್ಲದವರನ್ನು ತೆಗೆಯುಕೊಳ್ಳುವಂತಿಲ್ಲ.